**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 19-03-2024.**

**ಮುಂದುವರೆದ ಪಾಟೀ ಸವಾಲು - 2 ನೇ ಪ್ರತಿವಾದಿ ಪರ ವಕೀಲರಿಂದ :**

**1)** 2 ನೇ ಪ್ರತಿವಾದಿ ಸರ್ವೆ ಸಂಖ್ಯೆ 48 ನ್ನು ಖರೀದಿ ಮಾಡಿರುವುದರಿಂದ ಅವರನ್ನು ಪಕ್ಷಕಾರರನ್ನಾಗಿ ಮಾಡಿದ್ದೇನೆ. ಅವರು ಸದರಿ ಸ್ವತ್ತನ್ನು ಖರೀದಿಸಿ 20 ವರ್ಷ ಆಗಿರುತ್ತದೆ. ಸದರಿ ಸ್ವತ್ತನ್ನು ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ಮಾರಾಟ ಮಾಡಿರುತ್ತಾರೆ. ಯಾವ ಕಾರಣಕ್ಕೆ ಮಾರಾಟ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಮಾರಾಟ ಮಾಡಿ ಬಂದ ಹಣವನ್ನು ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಕ್ಕೆ ನನ್ನ ಚಿಕ್ಕಮ್ಮ ಸುಶೀಲಮ್ಮ ಸಹಿ ಮಾಡಿರುತ್ತಾರೆ. ಆ ಸಮಯದಲ್ಲಿ ನಮ್ಮ ತಾಯಿ ಮರಣ ಹೊಂದಿದ್ದರು. ಮಂಜುನಾಥ್ ಎಂದರೆ ನಮ್ಮ ಚಿಕ್ಕಪ್ಪನ ಮಗ. ಅವರು ಸಹಿ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಣ್ ಎಂದರೆ ಸುಶೀಲಮ್ಮ ಅವರ ಮಗ. ರತ್ನಮ್ಮ ನಮ್ಮ ಚಿಕ್ಕಪ್ಪನ ಹೆಂಡತಿ. ಅವರೆಲ್ಲಾ ಸದರಿ ಕ್ರಯಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಾವು ಮಾಡಿಲ್ಲ ಎಂದು ನುಡಿಯುತ್ತೇನೆ. ದಾವಾಸ್ವತ್ತಿನ ಬಗ್ಗೆ ನಮ್ಮ ತಂದೆ ಅಥವಾ ಇತರರು ಸಾಲ ಮಾಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಬಗ್ಗೆ ಬ್ಯಾಂಕಿನಲ್ಲಿ ಸಾಲ ಮಾಡಿದ್ದು, ಸಾಲ ಮಾರುಪಾವತಿಸಲು ಅದನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರ್.ಎಸ್.ಎಸ್.ಬಿ. ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಸಾಲ ಮಾಡಿದ್ದು ಅದನ್ನು ಮರು ಪಾವತಿಸಲು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು. ನನ್ನ ಮದುವೆಯಾಗಿ 40 ವರ್ಷ ಆಗಿರುತ್ತದೆ. ಸರ್ವೆ ಸಂಖ್ಯೆ 48 ಈಗಾಗಲೇ ಭೂ ಪರಿವರ್ತನೆಯಾಗಿ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ದಾವಾ ಐಟಂ ಸಂಖ್ಯೆ 4 ನ್ನು ಖರೀದಿಸಿದ ನಂತರ ಭೂ ಪರಿವರ್ತನೆ ಮಾಡಿ ನಿವೇಶನಗಳನ್ನು ಬೇರೆ ಬೇರೆಯವರಿಗೆ

ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸಾದೇನಹಳ್ಳಿಯ ನಿವಾಸಿ. ನನ್ನನ್ನು ಬೈರದೇನಹಳ್ಳಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. ನನ್ನ ಗಂಡನನ್ನು ಮನೆ ಅಳಿಯನನ್ನಾಗಿ ಮಾಡಿಕೊಂಡು ನಾವು ಸಾದೇನಹಳ್ಳಿಯಲ್ಲಿ ವಾಸವಿದ್ದೆವು. ನಮ್ಮ ತಂದೆಯ ಎರಡನೇ ಹೆಂಡತಿಗೆ ಲಕ್ಷ್ಮಣ ಒಬ್ಬ ಮಗ. ಗಂಡುಮಕ್ಕಳು ಇದ್ದರೆ ಮನೆ ಅಳಿಯರನ್ನು ಇಟ್ಟುಕೊಳ್ಳುವುದಿಲ್ಲ, ನಾನು ಬೈರದೇನಹಳ್ಳಿಯಲ್ಲೇ ನನ್ನ ಗಂಡನ ಮನೆಯಲ್ಲಿ ವಾಸವಿದ್ದೆನು ಎಂದರೆ ಸರಿಯಲ್ಲ. ಎರಡನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟ ನಂತರ ಸರ್ವೆ ನಂಬರ್ ತಪ್ಪಾಗಿರುವ ಬಗ್ಗೆ ತಿದ್ದುಪಡಿ ಪತ್ರವನ್ನು ಮಾಡಿ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಹನುಮಂತರಾಯಪ್ಪ ಅವರು ಮರಣ ಹೊಂದಿದ್ದು ಸದರಿ ತಿದ್ದುಪಡಿ ಪತ್ರವನ್ನು ಸುಶೀಲಮ್ಮ, ಲಕ್ಷ್ಮಣ ಮತ್ತು ಅಪ್ಪಣ್ಣ ಸೇರಿ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಾರಾಟ ಮಾಡಿರುವ ಬಗ್ಗೆ ನನಗೆ 1998 ರಲ್ಲಿ ಗೊತ್ತಿತ್ತು ಎಂದರೆ ಸರಿಯಲ್ಲ. 1998 ರಲ್ಲಿ ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ಸಂಖ್ಯೆ 4 ನ್ನು ಮಾರಾಟ ಮಾಡಿದಾಗ ನನ್ನ ಮದುವೆಯಾಗಿ 20 ವರ್ಷ ಆಗಿತ್ತು. 1, 4 ಮತ್ತು 5 ನೇ ವಾದಿಗಳು ಕ್ರಯಪತ್ರಕ್ಕೆ ಸಹಿ ಮಾಡಿರುವುದರಿಂದ ನಮಗೆ 1998 ರಲ್ಲೇ ಕ್ರಯಪತ್ರದ ಬಗ್ಗೆ ಮಾಹಿತಿ ಇತ್ತು ಎಂದರೆ ಅವರಿಗೆ ಗೊತ್ತಿರಬಹುದು, ನನಗೆ ಗೊತ್ತಿಲ್ಲ. ನಾನು ಸಾದೇನಹಳ್ಳಿಯಲ್ಲಿ ವಾಸವಿರುವುದರಿಂದ ನಿವೇಶನಗಳನ್ನು ಮಾಡಿ ಮಾರಾಟ ಮಾಡಿರುವ ಬಗ್ಗೆ ನನಗೆ ಮೊದಲೇ ಮಾಹಿತಿ ಇತ್ತು ಎಂದರೆ ಸರಿಯಲ್ಲ. ದಾವಾ ಐಟಂ ಸಂಖ್ಯೆ 4 ನ್ನು ಮಾರಾಟ ಮಾಡಿರುವ ಬಗ್ಗೆ ಈ ದಾವೆ ದಾಖಲಿಸುವಾಗ ನನಗೆ ಮಾಹಿತಿ ಇಲ್ಲದ ಕಾರಣ ಅದನ್ನು ಆಗಲೇ ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನಾನು 1, 4 ಮತ್ತು 5 ನೇ ವಾದಿಗಳ ಜೊತೆ ಮಾತನಾಡುವುದಿಲ್ಲ. ಈ ದಾವೆ ದಾಖಲಿಸುವಾಗ ಎಲ್ಲಾ ವಾದಿಗಳು ಜೊತೆಯಲ್ಲಿ ಹೋಗಿದ್ದೆವು. ಈ ದಾವೆ ದಾಖಲಿಸುವಾಗ ದಾವಾ ಐಟಂ ಸಂಖ್ಯೆ 4 ರ ಬಗ್ಗೆ ನಮಗೆ ಸಂಪೂರ್ಣ ಮಾಹಿತಿ ಇತ್ತು, ಆದರೆ ಆನಂತರ 2 ನೇ ಪ್ರತಿವಾದಿಯಿಂದ ಹಣ ಮಾಡಬೇಕು ಎಂಬ ಕಾರಣಕ್ಕೆ ನಂತರ ಸದರಿ ಸ್ವತ್ತನ್ನು ಈ

ದಾವೆಯಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮತ್ತು ನಿವೇಶನಗಳ ಖರೀದಿದಾರರಿಗೆ ತೊಂದರೆ ನೀಡಬೇಕು ಎಂಬ ಕಾರಣಕ್ಕೆ ಸುಳ್ಳು ದಾವೆ ದಾಖಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ಸಂಖ್ಯೆ 4 ರಲ್ಲಿ ವಾದಿಗಳಿಗೆ ಯಾವುದೇ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**